ತರಾತುರಿಯಲ್ಲಿ ಬೀದಿಗಿಳಿದರು ಮತ್ತು ಮಸೀದಿಯತ್ತ ದಾಪುಗಾಲನ್ನು ಹಾಕತೊಡಗಿದರು. ಅವರು ಅತ್ತ ಹೋದೊಡನೆಯೇ ಜೀನತ್ ಲಗುಬಗೆಯಿಂದ ಅಂಗಳಕ್ಕೆ ಓಡಿ ಬಂದಳು. ಗೋಡೆ ಬದಿಯಲ್ಲಿ ಆನಿಸಿ ಇಟ್ಟಿದ್ದ ಏಣಿಯನ್ನು ಹತ್ತಲು ಅವಳಿಗೆ ಧೈರ್ಯ ಸಾಲಲಿಲ್ಲ. ಅವಳು ಅಲ್ಲಿಯೇ ಜಗುಲಿಯ ಮೇಲೆ ಇಟ್ಟಿದ್ದ ಕುರ್ಚಿಯ ಮೇಲೆ ಹತ್ತಿ ಸೆರಗಿನಿಂದ ಮೂಗು ಬಾಯಿಯನ್ನು ಮುಚ್ಚಿಕೊಳ್ಳುತ್ತಾ ಜೋರು ಧ್ವನಿಯಲ್ಲಿ ಕೂಗಿಹಾಗಿದಳು, "ದಾವೂದ್ ದಾವೂದ್ ಎಲ್ಲಿದೀಯ ನೀನು?" ಯಾವುದೇ ಉತ್ತರವಿಲ್ಲ. ಆಚೆಮನೆಯ ಮಹಡಿಯ ಮೇಲೆ ಹಾಕಿದ್ದ ಬಲ್ಬ್‌ನಿಂದ ಕ್ಷೀಣವಾದ ಬೆಳಕು ತೇಲಿ ಬರುತ್ತಿತ್ತು. ಸೂರ್ಯನು ಇನ್ನೂ ಎದ್ದಿರಲಿಲ್ಲ. ಆಕಳಿಸುವುದಂತೂ ದೂರವೇ ಉಳಿದಿತ್ತು. ಮಬ್ಬು ಕತ್ತಲೆಯೊಡನೆ ಮಡುಗಟ್ಟಿದ್ದ ದುರ್ವಾಸನೆಯನ್ನು ಹೊತ್ತು ತರುತ್ತಿದ್ದ ಮಾರುತದ ಅಲೆಗಳು ಅವಳನ್ನು ಸ್ಪರ್ಶಿಸುತ್ತಿದ್ದಂತೆಯೇ ಆ ಚಳಿಯಲ್ಲಿಯೂ ಕೂಡಾ ಅವಳು ಚಿಲ್ಲನೇ ಬೆವೆತಳು. ಆದರೂ ಕೂಡಾ ಇದ್ದ ಬದ್ದ ಧೈರ್ಯವನ್ನೆಲ್ಲಾ ಒಗ್ಗೂಡಿಸಿಕೊಂಡು ಅವಳು ಮತ್ತೊಮ್ಮೆ ಕೂಗಿ ಕರೆದಳು. "ದಾವೂದ್... ದಾವೂದ್..." ಆ ಕರೆಯಲ್ಲಿ ಆಪ್ತತೆ ಇತ್ತು. ಭಯಮಿಶ್ರಿತ ಯಾತನೆ ಇತ್ತು. ಯಾಚನೆ ಮತ್ತು ಆರ್ದ್ರತೆಯಿಂದ ಕೂಡಿದ್ದ ಆ ಕರೆ ವಿನೀತ ಪ್ರಾರ್ಥನೆಯಿಂದಲೂ ಕೂಡಿತ್ತು. ಆ ಕ್ಷಣದಲ್ಲಿ ಅವಳು ಅವನ ಎಲ್ಲಾ ಮೋಸಗಳನ್ನು, ಕುಟಿಲತೆಗಳನ್ನು ಮತ್ತು ಹೀನಕೃತ್ಯಗಳನ್ನು ಮರೆಯಲು ಸಿದ್ಧವಾಗಿದ್ದಳು. ಅವನ ಭದ್ರತೆ ಅವಳಿಗೆ ಮುಖ್ಯವಾಗಿತ್ತು. ಅವನ ಬಗ್ಗೆ ಅವಳ ಮನಸ್ಸಿನಲ್ಲಿ ಮೂಡಿದ್ದ ದ್ವೇಷ ಅಂಚಿಗೆ ಸರಿದಿತ್ತು. ಅವನಿಗೆ ಯಾವ ಧಾಬಿನ್ ಕೂಡಾ ಕುಕ್ಕದೆ ಇರಲಿ, ಅವನು ಆರೋಗ್ಯವಂತನಾಗಿ ಮರಳಲಿ ಎಂದೇ ಅವಳ ಅಂತರ್ಯ ಪ್ರಾರ್ಥಿಸುತ್ತಿತ್ತು.

ಅವಳು ಮತ್ತೊಮ್ಮೆ ಏರು ಧ್ವನಿಯಲ್ಲಿ ಕೂಗಿದಳು, "ದಾವೂದ್... ದಾವೂದ್... ದಾವೂದ್..." ಅವನು 'ಓ' ಎನ್ನಲಿಲ್ಲ, ಮರು ನುಡಿಯಲಿಲ್ಲ. ಧ್ವನಿಗಳು ಸತ್ತಿದ್ದ ಕ್ಷಣವದು. ಜೀರುಂಡೆಗಳ ಬಾಯಿ ಕೂಡಾ ಹೊಲಿದಿತ್ತು. ಕಪ್ಪೆಗಳು ಒಟಗುಟ್ಟುವುದನ್ನು ನಿಲ್ಲಿಸಿದ್ದವು. ಯಾವ ಜೀರುಂಡೆಗಳು ಕೂಡಾ ಕಿರುಗುಟ್ಟದೇ ಸ್ತಬ್ಧವಾಗಿದ್ದ ಗಳಿಗೆ ಅದು. ಒಂದು ಕಾಗೆಯಾದರೂ ಅರಚಬಾರದೇ? ಈ ಮೌನವನ್ನು ಮುರಿಯಬಾರದೇ? ಅವಳು ಎಷ್ಟೋ ಹೊತ್ತು ಹಾಗೆಯೇ ನಿಂತು ಕುರ್ಚಿಯ ಮೇಲೆ ಪಾದಗಳನ್ನು ಊರಿ ಗೋಡೆಯಾಚೆಯ ಸುದ್ದಿಯನ್ನು ನಿರೀಕ್ಷಿಸುತ್ತಿದ್ದಳು. ಕಾಲ ತನ್ನ ಗರಿಮೆಯನ್ನು, ವೇಗವನ್ನು, ಪ್ರಖರತೆಯನ್ನು ಮತ್ತು ಪ್ರಸ್ತುತತೆಯನ್ನು ಕಳೆದುಕೊಂಡ ಕ್ಷಣವದು. ಅವಳ ಬುದ್ಧಿ ಮತ್ತು ಅವಳ ದೇಹದ ನವ ದ್ವಾರಗಳ ಸ್ಪರ್ಶ, ಶ್ರವಣ, ನೋಟ ಅವಳಿಂದ ಸಂಪರ್ಕ ಕಳೆದುಕೊಂಡಿದ್ದ ಕ್ಷಣವದು. ಎಳೆ ಸೂರ್ಯನ ಬಾಲ ಕಿರಣಗಳು ನಾಚುತ್ತಾ, ಮುದುಡುತ್ತಾ, ಅರಳುವುದೋ ಬೇಡವೋ ಎಂದು ಗುಣ ಗುಣಿಸುತ್ತಾ ಮೆಲುವಾಗಿ ಜಾಲವನ್ನು ವಿಸ್ತರಿಸುತ್ತಿದ್ದ ಹೊತ್ತು ಅದು. ಅವಳು ಕಣ್ಣುಗಳನ್ನು ಮುಚ್ಚಿಕೊಂಡು ಆರ್ದ್ರವಾಗಿ ಬೇಡಿಕೊಳ್ಳುತ್ತಿದ್ದಳು, "ಅಲ್ಲಾಹನೆ... ಆದಿಯೇ... ಅಂತ್ಯವೇ... ಸತ್ಯವೇ... ನ್ಯಾಯವೇ... ನನ್ನ ಅಂತರಂಗವೇ... ಬಹಿರಂಗವೇ, ನನ್ನ ಒಡೆಯನೇ... ನನ್ನ ಇಡೀ ಬದುಕಿನ ಕಿಂಚಿತ್ತಾದರೂ ಒಳ್ಳೆಯದೆಂಬುದು ಪುಣ್ಯವೆಂಬುದು ಇದ್ದಲ್ಲಿ ದಾವೂದ್ ಅಪಾಯವಿಲ್ಲದೇ ಜೀವ ಸಹಿತವಾಗಿ ಪಾರಾಗಿ ಬರಲಿ. ನನ್ನ ದೇವರೆ, ನನ್ನ ಪ್ರಾರ್ಥನೆಯನ್ನು ಆಲಿಸು".

ಅದೇ ಹೊತ್ತಿನಲ್ಲಿ ಪವಾಡ ಸದೃಶವೆಂಬಂತೆ ದಾವೂದ್ ಗೋಡೆಯ ಬದಿಯಲ್ಲಿ ಚಲಿಸುತ್ತಿದ್ದುದು ಅವಳಿಗೆ ಕಂಡು ಬಂದಿತು. ಆ ಹೊತ್ತಿನಲ್ಲಿ ಅವನನ್ನು ಅಲ್ಲಿ ಕಂಡೊಡನೆಯೆ ಉಂಟಾದ ಅಪಾರವಾದ ಸಂತೋಷದ ನಡುವೆ ಅವನು ನೆರಳಿನಂತೆ ಕಂಡು ಬಂದ. ಅವನು ಉಸಿರಾಡುತ್ತಿರುವುದು ನಿಜವೇ, ಅವನು ಚಲಿಸುತ್ತಿರುವುದು ನಿಜವೇ, ಅವನ ಕೈಕಾಲುಗಳು ಸುಸ್ಥಿತಿಯಲ್ಲಿ ಇರುವುದು ನಿಜವೇ, ಅವಳು ಮತ್ತೆ ತನ್ನ ಬಾಹ್ಯ ಮನಸ್ಸಿನೊಡನೆ ಸಂಪರ್ಕವನ್ನು ಸಾಧಿಸುವಷ್ಟರಲ್ಲೇ ಅಚಾನಕವಾಗಿ ಅವನು ಒಂದು ಮರಿಯನ್ನು ಗೋಡೆಯ ಬದಿಯಿಂದ ಎತ್ತರಿಸಿದ. "ಭಾಬೀ, ಜೀನತ್ ಭಾಬೀ,